# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1044 |
| ಸದಸ್ಯರ ಹೆಸರು | ಶ್ರೀ. ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 29.09.2020. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಕಟ್ಟಡ ನಿರ್ಮಾಣ ಮಾಡಲು ಮರಳಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| (ಆ) | ಬಂದಿದ್ದಲ್ಲಿ, ಇದರ ನಿವಾರಣೆಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಮರಳಿನ ಕೊರತೆಯನ್ನು ಸರಿದೂಗಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರಂತೆ ಟೆಂಡರ್ ಕಂ–ಇ–ಹರಾಜು ಮೂಲಕ ನದಿ ಪಾತ್ರಗಳಲ್ಲಿ 257 ಮರಳು ಬ್ಲಾಕ್ ಗಳಿಗೆ ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. 18 ಮರಳು ಬ್ಲಾಕ್ ಗಳನ್ನು ಸರ್ಕಾರಿ ಕಾಮಗಾರಿಗೆ ಮೀಸಲಿರಿಸಿ ಗಣಿಗಾರಿಕೆಗೆ ಅನುಮತಿ ನೀಡಲಾಗಿರುತ್ತದೆ.<br>• 73 ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ ಲೈಸನ್ಸ್ ನೀಡಲಾಗಿರುತ್ತದೆ.<br>• ಕರಾವಳಿ ನಿಯಂತ್ರಣ ಪ್ರದೇಶಗಳ ನದಿ ಪಾತ್ರಗಳಲ್ಲಿ 34 ಮರಳು ದಿಬ್ಬಗಳಲ್ಲಿ ಮರಳು ತೆಗೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ರಾಜ್ಯದಲ್ಲಿ 289 ಎಂ–ಸ್ಯಾಂಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಘಟಕಗಳಿಂದ ರಾಜ್ಯದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ. |

--2

| | | |
|---|---|---|
| | | • ನದಿ ಪಾತ್ರಗಳ ಪಕ್ಕದ ಕೃಷಿ ಜಮೀನುಗಳಲ್ಲಿ ಪ್ರವಾಹದಿಂದ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಿ ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿಸಲು ಕೃಷಿ ಜಮೀನು ಮಾಲೀಕರುಗಳಿಗೆ ಸದರಿ ಮರಳನ್ನು ತೆಗೆದು ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಮುಂದುವರೆದು ಸರ್ಕಾರವು ದಿನಾಂಕ 05.05.2020 ರಂದು ಹೊಸ ಮರಳು ನೀತಿಯನ್ನು ಜಾರಿಗೆ ತಂದಿರುತ್ತದೆ. ಸದರಿ ಮರಳು ನೀತಿಯಂತೆ, I, II & III ನೇ ಶ್ರೇಣಿಯ ಹಳ್ಳ/ ತೊರೆಗಳಲ್ಲಿ ಹಾಗೂ ಕೆರೆಗಳು ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿಗಳಿಗೆ ವಿಲೇವಾರಿ ಮಾಡುವ ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಪ್ರಸ್ತುತ 98 ಮರಳು ನಿಕ್ಷೇಪದ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ.<br>• III, VI & V ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಹಾಗೂ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಲಭ್ಯವಿರುವ ಮರಳನ್ನು ತೆಗೆಯಲು ಸರ್ಕಾರ ಸ್ವಾಮದ ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೋರೇಶನ್ (KSMCL) ಮತ್ತು ಹಟ್ಟಿ ಚಿನ್ನದ ಗಣಿ ಕಂಪನಿ (HGML) ನಿಯಮಿತ ಇವರಿಗೆ ವಹಿಸಲಾಗಿರುತ್ತದೆ.<br>ಅದರಂತೆ, ಪ್ರಸ್ತುತ KSMCL ರವರಿಗೆ 31 ಹಾಗೂ HGML ರವರಿಗೆ 45 ಮರಳು ಬ್ಲಾಕ್ ಗಳಲ್ಲಿ ಮರಳು ಗಣಿಗಾರಿಕೆ ನಡೆಸಲು ಆಯಾ ಜಿಲ್ಲಾ ಮರಳು ಸಮಿತಿಗಳಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ. |
| (ಇ) | ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ರೀತಿಯ ಗಣಿಗಾರಿಕೆ ನಡೆಯುತ್ತಿದೆ ಹಾಗೂ ಇದರಿಂದ ಸರ್ಕಾರಕ್ಕೆ ಸಂದಾಯವಾಗುತ್ತಿರುವ ಸೆಸ್ ಎಷ್ಟು; (ವಿವರಗಳನ್ನು ಒದಗಿಸುವುದು) | ರಾಜ್ಯದ ಜಿಲ್ಲಾ ವ್ಯಾಪ್ತಿಗಳಲ್ಲಿ ನಡೆಯುತ್ತಿರುವ ವಿವಿಧ ಖನಿಜಗಳ ಗಣಿಗಾರಿಕೆ ವಿವರಗಳು ಹಾಗೂ ಅವುಗಳಿಂದ ಸರ್ಕಾರಕ್ಕೆ ಸಂದಾಯವಾಗಿರುವ ರಾಜಧನದ ವಿವರಗಳನ್ನು <u>ಅನುಬಂಧ-1</u> ಮತ್ತು <u>ಅನುಬಂಧ-2</u> ರಲ್ಲಿ ನೀಡಲಾಗಿದೆ. |

| | | |
|---|---|---|
| (ಈ) | ರಾಜ್ಯದಲ್ಲಿ ಅನಧಿಕೃತವಾಗಿ ಮರಳು ಮತ್ತು ವಿವಿಧ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು) | ಬಂದಿರುತ್ತದೆ.<br>ರಾಜ್ಯದಲ್ಲಿ ಸದರಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಗ್ರಹಿಸಲು ಸರ್ಕಾರದಿಂದ ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ.<br>• ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.<br>• ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ(ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22ರಡಿಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 1994ರ ನಿಯಮ 31-R ರ ಉಪ ನಿಯಮ 13 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯೋಜಿಸಲಾಗಿರುತ್ತದೆ.<br>• ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಗಳಿಂದ ರಾಜ್ಯದಲ್ಲಿ ಆಯಾಕಟ್ಟಿನ ಪ್ರದೇಶಗಳಲ್ಲಿ ಮರಳು ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.<br>• ಸರ್ಕಾರವು ದಿನಾಂಕ 30.06.2020 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ |

---4

ನಿಯಮ 43 ಕ್ಕೆ ತಿದ್ದುಪಡಿ ತಂದಿದ್ದು, ಸದರಿ ತಿದ್ದುಪಡಿ ನಿಯಮದಲ್ಲಿ ಅನಧಿಕೃತ ಮರಳು ಹಾಗೂ ಇತರೆ ಉಪಖನಿಜಗಳ ಸಾಗಾಣಿಕೆಯಡಿಯಲ್ಲಿ ಹೆಚ್ಚಿನ ದಂಡದ ಮೊತ್ತವನ್ನು ವಸೂಲಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

- ಅದರಂತೆ, ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿಯಲ್ಲಿ ಸಂಗ್ರಹಿಸಲಾದ ದಂಡದ ಮೊತ್ತ ಹಾಗೂ ದಾಖಲಿಸಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| ವರ್ಷ | ಅನಧಿಕೃತ ಮರಳು ಗಣಿಗಾರಿಕೆ | | ಅನಧಿಕೃತ ಮರಳು ಸಾಗಾಣಿಕೆ | | ಅನಧಿಕೃತ ಮರಳು ದಾಸ್ತಾನು | |
|---|---|---|---|---|---|---|
| | ವಸೂಲಾದ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮ್ಮೆಗಳ ಸಂಖ್ಯೆ | ವಸೂಲಾದ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮ್ಮೆಗಳ ಸಂಖ್ಯೆ | ವಸೂಲಾದ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮ್ಮೆಗಳ ಸಂಖ್ಯೆ |
| 2017-18 | 191.43 | 159 | 666.53 | 24.27 | 1211.07 | 77 |
| 2018-19 | 54.62 | 106 | 375.57 | 2584 | 479.29 | 176 |
| 2019-20 | 128.81 | 106 | 271.01 | 1866 | 52.75 | 113 |

ಸಂಖ್ಯೆ: ಸಿಐ 485 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಅನುಬಂಧ - 1

# District wise Major and Minor Minerals Leases granted in the State

| Sl No. | District | Major Minerals | Minor Minerals: Specified Minor Minerals | Minor Minerals: Non Specified Minor Minerals |
|---|---|---|---|---|
| 1 | Bagalkot | Iron Ore | Dolomite | Ordinary Building Stone |
| | | Lime Stone | Pink Granite | Ordinary Sand |
| | | - | Sand Stone | - |
| 2 | Ballari | Iron Ore | Grey Granite | Murram |
| | | Manganese | Pink Granite | Ordinary Building Stone |
| | | Martitised magnetitic Iron Ore | Quartz | Ordinary Sand |
| | | - | White Quartz | Waste Rocks |
| 3 | Bangalore Rural | - | Grey Granite | Ordinary Building Stone |
| | | | Pink Porphry | |
| 4 | Bangalore Urban | - | - | Ordinary Building Stone |
| 5 | Belgaum | Aluminous Laterite | Dolomite | Clay for Tiles and Bricks |
| | | Lime Stone | Grey Granite | Murram |
| | | - | Sand Stone | Ordinary Building Stone |
| | | | - | Ordinary Sand |
| 6 | Bidar | - | - | Ordinary Building Stone |
| 7 | Chamarajanagar | - | Black Granite | Ordinary Building Stone |
| | | | | Ordinary Sand |
| | | | | Waste Rocks |
| 8 | Chikkaballapur | - | Grey Granite | Ordinary Building Stone |
| | | | Pink Granite | Waste Rocks |
| 9 | Chikmagalur | - | Green Granite | Ordinary Building Stone |
| | | | | Ordinary Sand |
| 10 | Chitradurga | Iron Ore | - | Ordinary Building Stone |
| | | Manganese | | Ordinary Sand |
| 11 | Dakshina Kannada | - | Black Granite | Laterite |
| | | | | Ordinary Building Stone |
| | | | | Ordinary Sand |
| | | | | Waste Rocks |
| 12 | Davanagere | Manganese | - | Ordinary Building Stone |
| | | | | Ordinary Sand |
| 13 | Dharwad | - | - | Murram |
| | | | | Ordinary Building Stone |
| 14 | Gadag | - | - | Murram |
| | | | | Ordinary Building Stone |
| | | | | Ordinary Sand |

| Sl. No. | District | Major Minerals | Minor Minerals | |
|---|---|---|---|---|
| | | | Specified Minor Minerals | Non Specified Minor Minerals |
| 15 | Gulbarga | Lime Stone | - | Murram |
| | | | | Ordinary Building Stone |
| | | | | Ordinary Sand |
| | | | | Shahabad Stone |
| | | | | Shale |
| | | | | Fullers Earth |
| 16 | Hassan | - | Black Granite | Clay - Others |
| | | | China Clay | Ordinary Building Stone |
| | | | Pink Granite | Ordinary Sand |
| | | | Green Granite | Waste Rocks |
| | | | Multi Colour Granite | Murram |
| 17 | Haveri | - | - | Ordinary Building Stone |
| | | | | Ordinary Sand |
| | | | | Murram |
| 18 | Kodagu | - | - | Ordinary Building Stone |
| | | | | Ordinary Sand |
| 19 | Kolar | - | Black Granite | Clay for Tiles and Bricks |
| | | | Grey Granite | Murram |
| | | | - | Ordinary Building Stone |
| 20 | Koppal | Iron Ore | Grey Granite | Murram |
| | | | Pink Granite | Ordinary Building Stone |
| | | | Quartz | Ordinary Sand |
| | | | - | Waste Rocks |
| 21 | Mandya | - | Multi Colour Granite | Ordinary Building Stone |
| | | | - | Ordinary Sand |
| 22 | Mysuru | Kyanite | Black Granite | Ordinary Building Stone |
| | | Magnasite | Dunite | Waste Rocks |
| | | - | Steatite | - |
| | | | Tiger black | - |
| 23 | Raichur | Gold | Grey Granite | Murram |
| | | Silver | Pink Granite | Ordinary Building Stone |
| | | - | - | Ordinary Sand |
| | | | | Waste Rocks |
| 24 | Ramanagara | - | Black Granite | Brick earth |
| | | | Multi Colour Granite | Clay - Others |
| | | | Pink Granite | Clay for Tiles and Bricks |
| | | | - | Ordinary Building Stone |
| | | | | Waste Rocks |
| 25 | Shivamogga | - | - | Ordinary Building Stone |
| | | | | Ordinary Sand |

| Sl. No. | District | Major Minerals | Minor Minerals | |
|---|---|---|---|---|
| | | | Specified Minor Minerals | Non Specified Minor Minerals |
| 26 | Tumakuru | Iron Ore | China Clay or Kaoline includi ballClay whiteclay | Murram |
| | | Manganese | Clay Major | Ordinary Building Stone |
| | | - | Grey Granite | Waste Rocks |
| | | | Multi Colour Granite | - |
| | | | Pink Granite | - |
| | | | Pink Porphry | - |
| | | | Quartz | - |
| 27 | Udupi | - | Black Granite | - |
| | | | Silica Sand | Clay for Tiles and Bricks |
| | | | Grey Granite | Ordinary Building Stone |
| | | | - | Ordinary Sand |
| 28 | Uttara Kannada | - | - | Murram |
| | | | | Ordinary Building Stone |
| | | | | Ordinary Sand |
| 29 | Vijayapura | - | - | Ordinary Building Stone |
| 30 | Yadgir | - | - | Ordinary Building Stone |
| | | | | Ordinary Sand |

ಅನುಬಂಧ - 2

# 2019-20ನೇ ಸಾಲಿನಲ್ಲಿ ಜಿಲ್ಲಾವಾರು ರಾಜಧನ ಸಂಗ್ರಹಿಸಿದ ವಿವರಗಳು

ರೂ.ಲಕ್ಷಗಳಲ್ಲಿ

| ಕ್ರ. ಸಂ | ಜಿಲ್ಲೆ | 2019-20 | | |
|---|---|---|---|---|
| | | ಮುಖ್ಯ ಖನಿಜ | ಉಪಖನಿಜ | ಮೊತ್ತ |
| 1 | Bagalkot | 3915.38 | 2601.88 | 6517.26 |
| 2 | Bangalore Rural | 0.00 | 3599.42 | 3599.42 |
| 3 | Bangalore Urban | 0.00 | 15083.57 | 15083.57 |
| 4 | Belgaum | 1807.80 | 7930.05 | 9737.85 |
| 5 | Bellary | 8.95 | 3837.40 | 3846.35 |
| 6 | Bidar | 0.00 | 1612.27 | 1612.27 |
| 7 | Bijapur | 0.00 | 3100.33 | 3100.33 |
| 8 | Chamarajanagar | 0.00 | 2746.47 | 2746.47 |
| 9 | Chickamagalur | 0.00 | 2459.42 | 2459.42 |
| 10 | Chikaballapura | 0.00 | 4584.17 | 4584.17 |
| 11 | Chitradurga | 93.07 | 8007.51 | 8100.58 |
| 12 | Dakshina kannada | 0.12 | 2635.00 | 2635.12 |
| 13 | Davangere | 70.71 | 2428.20 | 2498.91 |
| 14 | Dharwad | 0.00 | 11550.25 | 11550.25 |
| 15 | Gadag | 0.00 | 3807.63 | 3807.63 |
| 16 | Hassan | 3.09 | 8197.99 | 8201.08 |
| 17 | Haveri | 0.00 | 3436.94 | 3436.94 |
| 18 | Head Office | 142300.49 | 46256.13 | 188556.62 |
| 19 | Hospet | 10044.18 | 3870.56 | 13914.74 |
| 20 | Kalaburagi | 21046.25 | 3419.45 | 24465.70 |
| 21 | Kodagu | 0.00 | 800.60 | 800.60 |
| 22 | Kolar | 4.24 | 2694.65 | 2698.89 |
| 23 | Koppal | 74.33 | 4898.72 | 4973.05 |
| 24 | Mandya | 0.00 | 2602.92 | 2602.92 |
| 25 | Mysore | 26.02 | 3598.67 | 3624.69 |
| 26 | Raichur | 2265.06 | 4321.48 | 6586.54 |
| 27 | Ramanagara | 0.00 | 4171.44 | 4171.44 |
| 28 | Shimoga | 0.00 | 2064.64 | 2064.64 |
| 29 | Tumkur | 1.83 | 6086.71 | 6088.54 |
| 30 | Udupi | 0.00 | 2423.49 | 2423.49 |
| 31 | Uttara Kannada | 1.01 | 3593.70 | 3594.71 |
| 32 | Yadgir | 4.46 | 2813.35 | 2817.81 |
| | **Total** | **181666.99** | **181235.01** | **362902.00** |